# PROCEEDINGS OF THE GOVERNMENT OF KARNATAKA

**Sub:-** Dearness Allowance – Revision of rates.

**READ:** G.O.No. FD 8 SRP 2003, dated 7-6-2003.

**Preamble:**

The Karnataka State Government Employees' Association has represented that the State Government Employees be granted one more instalment of Dearness Allowance with effect from 1-7-2003 in accordance with the existing formula. The matter has been considered.

## ORDER NO. FD 24 SRP 2003, BANGALORE, DATED:29th JANUARY 2004

Government are pleased to sanction increase in the rates of Dearness Allowance from existing 55% of the basic pay to 59% of the basic pay to the State Government employees with effect from 1st July 2003.

2. The increase in Dearness Allowance admissible under this order is payable in cash from the month of January 2004 onwards, until further orders.

3. The Karnataka State Government Employees' Association has agreed for recovery of entire arrears of Dearness Allowance for the period from July 2003 to December 2003 (both months inclusive) and for contributing the arrears to Calamity Relief in view of severe drought conditions prevailing in the State.

4. The Drawing and Disbursing Officers shall, therefore, draw the arrears of Dearness Allowance for the period from July 2003 to December 2003 in respect of officers and staff coming under their establishment and show the entire arrears as contribution to Calamity Relief, thereby showing 'nil' cash payment in the bills.

5. The sub-treasuries and district treasuries in the State shall apply usual treasury checks on the bills and shall by means of TTR transfer the contributions to the Head of Account **'0070-60-800-3-17-Contribution of DA Arrears of Government Employees for Calamity relief'.** In respect of Grant-in-Aid employees, the arrears shall be credited by transfer to the Head of Account **'0070-60-800-3-18-Contribution of DA Arrears of Grant-in-Aid Employees for Calamity relief'.**

6. In the case of a Government Servant/Grant-in-Aid employee who ceases to be in service due to retirement / resignation / death during the period from 1st July 2003 to 31st December 2003, the arrears of Dearness Allowance payable under this order shall be drawn till the date of retirement/resignation/death and credited to the above Head of Account.

7. These orders will apply to the full time Government employees, employees of Zilla Panchayats, work charged employees on regular time scale of pay, the full time employees of Aided Educational Institutions and Universities who are on regular time scales of pay. These orders will also apply to the Judicial Officers, and further to the teaching staff, Librarians and Physical Education Personnel who are on UGC/AICTE/ICAR scales of pay.

8. For the purpose of these orders, the term 'Basic Pay' means, pay drawn by a Government Servant in the scale of pay applicable to the post held by him and includes -

a) Stagnation increment, if any, granted to him above the maximum of the scale of pay.
b) Personal Pay, if any, granted to him under sub-rule (3) of Rule 7 of the Karnataka Civil Services (Revised Pay) Rules, 1999.

9. Basic Pay shall not include any emoluments other than those specified above.

10. In respect of Teachers, Librarians, Physical Education Personnel who are still continuing in the pre-revised UGC, AICTE and ICAR scales of pay, basic pay includes Dearness Allowance sanctioned up to 1.1.1996 vide G.O. No. FD 8 SRP 96 dated 8.5.1996.

11. The payment on account of Dearness Allowance involving fractions of 50 paise and above shall be rounded off to the next rupee and fractions less than 50 paise shall be ignored.

12. The Dearness Allowance will be shown as a distinct element of remuneration and will not be treated as pay for any purpose.

**BY ORDER AND IN THE NAME OF THE GOVERNOR OF KARNATAKA**

**(N.T.NAIK)**
**Deputy Secretary to Government,**
**Finance Department (Services-2).**

**To**

1. The Chief Secretary/Additional Chief Secretaries to Government.
2. The Principal Secretaries/Secretaries to Government.
3. The Heads of Departments.
4. The Deputy Commissioners of Districts.
5. The Chief Executive Officers of Zilla Panchayaths.
6. The Accountant General (Accounts/Audit) (G.M. Branch), Karnataka, Bangalore.
7. The Registrar, High Court of Karnataka, Bangalore.
8. The Registrar, Karnataka Lokayukta, Bangalore.
9. The Registrar, Karnataka Administrative Tribunal, Bangalore.
10. The Secretary, Karnataka Public Service Commission, Bangalore.
11. The Secretary, Karnataka Legislative Assembly/Legislative Council, Bangalore.
12. The Treasury Officer, State Huzur Treasury/District Treasuries.
13. The Senior Research Officer, Pay Research Unit, Department of Expenditure, Ministry of Finance, Government of India, New Delhi.
14. The Compiler, Karnataka Gazette for publication in the next issue of the gazette and to supply 500 copies to Finance Department.
15. The President, Karnataka State Government Employees Association, Bangalore.
16. All Sections of the Karnataka Government Secretariat.
17. Karnataka Government Secretariat Library/Legislature Library.
18. Weekly Gazette.
19. Section Guard File.

[Sl. Nos. 7, 8, 9, 10, and 11 with a covering letter.]

**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:**- ತುಟ್ಟಿ ಭತ್ಯೆಯ ದರಗಳ ಪರಿಷ್ಕರಣೆ.

**ಓದಲಾಗಿದೆ:**- ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 8 ಎಸ್‌ಆರ್‌ಪಿ 2003,
ದಿನಾಂಕ: 7-6-2003.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಹಾಲಿ ಇರುವ ನಿಯಮದಂತೆ ರಾಜ್ಯ ಸರ್ಕಾರಿ ನೌಕರರಿಗೆ ದಿನಾಂಕ 1-7-2003 ರಿಂದ ಒಂದು ಹೆಚ್ಚುವರಿ ತುಟ್ಟಿಭತ್ಯೆಯ ಕಂತನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. ಈ ವಿಷಯವನ್ನು ಪರಿಶೀಲಿಸಲಾಗಿದೆ.

**ಆದೇಶ ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2003, ಬೆಂಗಳೂರು,**
**ದಿನಾಂಕ:29ನೇ ಜನವರಿ 2004**

ಸರ್ಕಾರವು ದಿನಾಂಕ 1-7-2003 ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ಲಭ್ಯವಿರುವ ತುಟ್ಟಿ ಭತ್ಯೆಯ ದರವನ್ನು ಮೂಲ ವೇತನದ ಶೇ.55 ರಿಂದ ಶೇ.59 ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ.

2. ಈ ಆದೇಶದ ಮೇರೆಗೆ ಮಂಜೂರಾಗಿರುವ ತುಟ್ಟಿ ಭತ್ಯೆಯನ್ನು ಜನವರಿ 2004 ರಿಂದ ಮುಂದಕ್ಕೆ ಮತ್ತು ಮುಂದೆ ಮರು ಆದೇಶ ಹೊರಡಿಸುವವರೆಗೆ ನಗದಾಗಿ ಪಾವತಿ ಮಾಡಲಾಗುವುದು.

3. ರಾಜ್ಯದಲ್ಲಿ ತಲೆದೋರಿರುವ ತೀವ್ರ ಕ್ಷಾಮ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜುಲೈ 2003 ರಿಂದ ಡಿಸೆಂಬರ್ 2003ರ ಅವಧಿಗೆ (ಎರಡು ತಿಂಗಳೂ ಸೇರಿದಂತೆ) ಸಂದಾಯವಾಗುವ ತುಟ್ಟಿ ಭತ್ಯೆಯ ಸಂಪೂರ್ಣ ಬಾಕಿಯನ್ನು ವಸೂಲಿ ಮಾಡಲು ಮತ್ತು ಅದನ್ನು ಕ್ಷಾಮ ಪರಿಹಾರಕ್ಕೆ ಕೊಡುಗೆಯಾಗಿ ನೀಡಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಒಪ್ಪಿರುತ್ತದೆ.

4. ಆದ್ದರಿಂದ, ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಜುಲೈ 2003 ರಿಂದ ಡಿಸೆಂಬರ್ 2003ರ ವರೆಗಿನ ಅವಧಿಯ (ಎರಡು ತಿಂಗಳೂ ಸೇರಿ) ಹೆಚ್ಚುವರಿ ತುಟ್ಟಿ ಭತ್ಯೆಯ ಸಂಪೂರ್ಣ ಬಾಕಿ ಮೊತ್ತವನ್ನು ಡ್ರಾ ಮಾಡಿ ಆ ಪೂರ್ಣ ಮೊತ್ತವನ್ನು ಕ್ಷಾಮ ಪರಿಹಾರಕ್ಕೆ ಕೊಡುಗೆ ಎಂದು ತೋರಿಸಿ, ಆ ಮೂಲಕ ಬಿಲ್ಲಿನಲ್ಲಿ ನಗದಾಗಿ ಪಾವತಿಸುವುದು 'ಶೂನ್ಯ' ಎಂದು ತೋರಿಸತಕ್ಕದ್ದು.

5. ರಾಜ್ಯದಲ್ಲಿನ ಜಿಲ್ಲಾ ಖಜಾನೆಗಳು ಮತ್ತು ಉಪ ಖಜಾನೆಗಳು ಬಿಲ್ಲುಗಳ ಮೇಲೆ ಮಾಮೂಲಿನಂತೆ ಖಜಾನೆ ತನಿಖೆ ಮಾಡತಕ್ಕದ್ದು, ಮತ್ತು ಈ ಕೊಡುಗೆಯನ್ನು ಟಿಟಿಆರ್ ಮೂಲಕ ಲೆಕ್ಕ ಶೀರ್ಷಿಕೆ "0070-60-800-3-17-ಕ್ಷಾಮ ಪರಿಹಾರಕ್ಕೆ ಸರ್ಕಾರಿ ನೌಕರರ ತುಟ್ಟಿಭತ್ಯೆ ಬಾಕಿ ಕೊಡುಗೆ"ಗೆ ಎಂದು ವರ್ಗಾವಣೆ ಮೂಲಕ ಜಮಾ ಮಾಡತಕ್ಕದ್ದು. ಅನುದಾನಿತ ಸಂಸ್ಥೆಗಳ

ನೌಕರರಿಗೆ ಸಂಬಂಧಪಟ್ಟಂತೆ ತುಟ್ಟಿ ಭತ್ಯೆ ಬಾಕಿಯನ್ನು ಲೆಕ್ಕ ಶೀರ್ಷಿಕೆ **"0070-60-800-3-18**-ಕ್ಷಾಮ ಪರಿಹಾರಕ್ಕೆ ಅನುದಾನಿತ ಸಂಸ್ಥೆಗಳ ನೌಕರರ ತುಟ್ಟಿ ಭತ್ಯೆ ಬಾಕಿ ಕೊಡುಗೆ"ಗೆ ಎಂದು ವರ್ಗಾವಣೆ ಮೂಲಕ ಜಮಾ ಮಾಡತಕ್ಕದ್ದು.

6. ದಿನಾಂಕ:1-7-2003 ರಿಂದ 31-12-2003ರ ಅವಧಿಯಲ್ಲಿ ನಿವೃತ್ತಿ/ರಾಜೀನಾಮೆ/ ನಿಧನದ ಕಾರಣದಿಂದ ಸೇವೆಯಲ್ಲಿ ಇಲ್ಲದಿರುವ ಸರ್ಕಾರಿ ನೌಕರರಿಗೆ/ಅನುದಾನಿತ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದಂತೆ ಅವರು ನಿವೃತ್ತರಾದ/ರಾಜೀನಾಮೆ ನೀಡಿದ/ನಿಧನರಾದ ಅವಧಿಯ-ವರೆಗಿನ ಬಾಕಿಯನ್ನು ಡ್ರಾ ಮಾಡಿ ಮೇಲ್ಕಂಡ ಲೆಕ್ಕ ಶೀರ್ಷಿಕೆಗೆ ಜಮಾ ಮಾಡತಕ್ಕದ್ದು.

7. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರುಗಳಿಗೆ ಈ ಆದೇಶ ಅನ್ವಯಿಸುತ್ತದೆ. ಈ ಆದೇಶವು ನ್ಯಾಯಾಂಗ ಅಧಿಕಾರಿಗಳಿಗೆ, ಮತ್ತು ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಯಲ್ಲಿರುವ ಬೋಧಕ ಸಿಬ್ಬಂದಿ, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಸಿಬ್ಬಂದಿಗೂ ಅನ್ವಯಿಸುತ್ತದೆ.

8. ಈ ಆದೇಶಗಳ ಉದ್ದೇಶಗಳಿಗಾಗಿ ಮೂಲವೇತನ ಎಂದರೆ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯಲ್ಲಿ ಪಡೆಯುವ ವೇತನ ಮತ್ತು ಅದರಲ್ಲಿ,

(ಅ) ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಅವನಿಗೆ ಸ್ಥಗಿತ ವೇತನ ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನ ಬಡ್ತಿ.

(ಆ) 1999ರ ಕರ್ನಾಟಕ ಸರ್ಕಾರಿ ಸೇವಾ (ಪರಿಷ್ಕೃತ ವೇತನ) ನಿಯಮಗಳ 7ನೇ ನಿಯಮದ (3)ನೇ ಉಪನಿಯಮದ ಮೇರೆಗೆ ಅವನಿಗೆ ನೀಡಲಾದ ವೈಯಕ್ತಿಕ ವೇತನ ಯಾವುದಾದರೂ ಇದ್ದರೆ, ಆ ವೈಯಕ್ತಿಕ ವೇತನ ಸೇರುತ್ತವೆ.

9. ಮೂಲವೇತನಕ್ಕೆ ಮೇಲೆ ಸೂಚಿಸಿರುವುದನ್ನು ಹೊರತುಪಡಿಸಿ ಇತರೆ ಯಾವುದೇ ಉಪಲಬ್ಧಿಗಳನ್ನು ಸೇರಿಸತಕ್ಕದ್ದಲ್ಲ.

10. ಪೂರ್ವ ಪರಿಷ್ಕೃತ ಯು.ಜಿ.ಸಿ., ಎ.ಐ.ಸಿ.ಟಿ.ಇ. ಮತ್ತು ಐ.ಸಿ.ಎ.ಆರ್. ವೇತನ ಶ್ರೇಣಿಗಳಲ್ಲಿ ಮುಂದುವರಿಯುತ್ತಿರುವ ಬೋಧಕ ಸಿಬ್ಬಂದಿ, ದೈಹಿಕ ಶಿಕ್ಷಣ ಸಿಬ್ಬಂದಿ ಹಾಗೂ ಗ್ರಂಥಪಾಲಕರ ಪ್ರಕರಣಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 8 ಎಸ್‌ಆರ್‌ಪಿ 96 ದಿನಾಂಕ 8-5-1996 ರಲ್ಲಿ ದಿನಾಂಕ 1-1-1996ರ ವರೆಗೆ ಮಂಜೂರಾಗಿರುವ ತುಟ್ಟಿ ಭತ್ಯೆಯು ಸಹ ಮೂಲ ವೇತನದಲ್ಲಿ ಸೇರುತ್ತದೆ.

11. ತುಟ್ಟಿ ಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

12. ತುಟ್ಟಿ ಭತ್ಯೆಯನ್ನು ಸಂಭಾವನೆಯ ವಿಭಿನ್ನ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ಎನ್.ಟಿ.ನಾಯ್ಕ್)**
**ಸರ್ಕಾರದ ಉಪಕಾರ್ಯದರ್ಶಿ,**
**ಆರ್ಥಿಕ ಇಲಾಖೆ (ಸೇವೆಗಳು-2).**

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಇಲಾಖಾ ಮುಖ್ಯಾಧಿಕಾರಿಗಳು.
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ)(ಜಿ.ಎಂ.ಶಾಖೆ), ಕರ್ನಾಟಕ, ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
12. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
13. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
14. ಸಂಕಲನಕಾರರು, ಕರ್ನಾಟಕ ಗೆಜೆಟ್‌ನ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
16. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
17. ವಾರಪತ್ರ.
18. ಶಾಖೆಯ ರಕ್ಷಾ ಕಡತ.

[ಕ್ರಮ ಸಂಖ್ಯೆ: 7, 8, 9, 10 ಮತ್ತು 11 ರಲ್ಲಿ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ.]